# ಮೂತ್ರಪಿಂಡದ ಮೇಲೂ ಅತ್ಯಾಚಾರ!

**ಮೂತ್ರಪಿಂಡ ಬಯಸುವ ಸಿರಿವಂತರಿಂದ ನಾಲ್ಕೈದು ಲಕ್ಷ ರೂ. ದುಡ್ಡು ಪಡೆಯುವ ದಲ್ಲಾಳಿಗಳು, ದಾನ ನೀಡಿದ ಬಡವರ ಕೈಯಲ್ಲಿ 50 ಸಾವಿರ ರೂ.ನಿಂದ ಒಂದು ಲಕ್ಷ ಕೊಟ್ಟರೆ ಅದೇ ಹೆಚ್ಚು.**

ಮನುಷ್ಯನ ದೇಹದೊಳಗೆ ಒಟ್ಟು ಎರಡು ಮೂತ್ರಪಿಂಡ (ಕಿಡ್ನಿ) ಕಾರ್ಯ ನಿರ್ವಹಿಸುತ್ತಿರುತ್ತವೆ. ಒಂದು ಮೂತ್ರಪಿಂಡ ವಿಫಲವಾದರೆ ಅಥವಾ ತೆಗೆದುಹಾಕಿದರೆ ಉಳಿದ ಒಂದರಲ್ಲಿ ಒಬ್ಬ ವ್ಯಕ್ತಿ ಜೀವನ ನಡೆಸಬಲ್ಲ. ಎರಡೂ ಮೂತ್ರಪಿಂಡ ವಿಫಲವಾದರೆ, ಮತ್ತೊಬ್ಬರಿಂದ ಒಂದು ಮೂತ್ರಪಿಂಡವನ್ನು ದಾನವಾಗಿ ಪಡೆದು ತನ್ನ ದೇಹದಲ್ಲಿ ಕಸಿ ಮಾಡಿಸಿಕೊಳ್ಳಬಹುದು. ವೈದ್ಯಕೀಯ ವಿಜ್ಞಾನ ಪ್ರಗತಿ ಹೊಂದಿದಂತೆ ಈ ವಿಧಾನ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಕಾನೂನಿನಲ್ಲಿ ಅದಕ್ಕೆ ಸೀಮಿತ ಅವಕಾಶವೂ ಇದೆ. ಸಂಬಂಧಿಗಳು ಹಾಗೂ ನೆರೆಹೊರೆಯ ಚಿರಪರಿಚಿತರು ಮತ್ತು ಮರಣಾನಂತರ ದೇಹದಾನ ಮಾಡಿದವರ ಮೂತ್ರಪಿಂಡಗಳನ್ನು ಮಾತ್ರ ಹೀಗೆ ದಾನವಾಗಿ ಪಡೆಯಬಹುದು. ಆದರೆ ದೇಹದಾನದ ಬಗ್ಗೆ ಅಷ್ಟಾಗಿ ಪ್ರಜ್ಞಾವಂತಿಕೆ ಬೆಳೆದಿಲ್ಲವಾದ್ದರಿಂದ ಮರಣದ ನಂತರ ದೇಹದಾನ ಮಾಡುವವರ ಸಂಖ್ಯೆಯೂ ಕಡಿಮೆ ಇದೆ. ಹೀಗೆ ನಿಯಮಗಳ ಪ್ರಕಾರ ಮೂತ್ರಪಿಂಡಗಳಿಗಾಗಿ ಕಾಯುತ್ತಿರುವವರ ಸಂಖ್ಯೆ ದೇಶದಲ್ಲಿ 2,500ಕ್ಕೂ ಅಧಿಕ ಇದೆ ಎಂದು ಒಂದು ಅಂಕಿ ಅಂಶ ಹೇಳುತ್ತದೆ. ಈ ಸಂಖ್ಯೆ ಇನ್ನೂ ಹೆಚ್ಚೇ ಇರಬೇಕು. ಹಾಗಾಗಿ 'ಬೇಡಿಕೆ'ಗೆ ಅನುಗುಣವಾದ 'ಪೂರೈಕೆ' ಇಲ್ಲ.


ನಿಯಮದ ಪ್ರಕಾರ ಮೂತ್ರಪಿಂಡ ದೊರೆಯದಿದ್ದರೆ ಬಡವರಿಗೆ, ಮಧ್ಯಮವರ್ಗದವರಿಗೆ ಸಾವೇ ಗತಿ. ಆದರೆ ದುಡ್ಡಿದ್ದವರು ಬಡವರಿಂದ ಮೂತ್ರಪಿಂಡಗಳನ್ನು ಅಕ್ರಮವಾಗಿ ಕೊಳ್ಳಲಾರಂಭಿಸಿದರು. ಅದಕ್ಕಾಗಿ ದಲ್ಲಾಳಿಗಳು ಹುಟ್ಟಿಕೊಂಡು ಅದೊಂದು ದಂಧೆಯಾಗಿಯೇ ಬೆಳೆದಿದೆ. ಬಡವರಿಗೆ ದುಡ್ಡಿನ ಅವಶ್ಯಕತೆ ಇರುತ್ತದೆ. ಅದನ್ನು ದುರುಪಯೋಗ ಪಡಿಸಿಕೊಂಡ ಈ ದಲ್ಲಾಳಿಗಳು ಮೂತ್ರಪಿಂಡ ದಾನ ಪಡೆಯಬಯಸುವ ಸಿರಿವಂತರಿಂದ ನಾಲ್ಕೈದು ಲಕ್ಷ ರೂ. ದುಡ್ಡು ಪಡೆದು, ದಾನ ನೀಡಿದ ಬಡವರ ಕೈಯಲ್ಲಿ 50 ಸಾವಿರ ರೂ.ನಿಂದ ಒಂದು ಲಕ್ಷ ಕೊಟ್ಟರೆ ಅದೇ ಹೆಚ್ಚು. ನಂತರ ಹೆಚ್ಚು ಹಣ ಕೊಡುವುದಾಗಿ ಹೇಳಿ ಅದಕ್ಕೂ ಕೈ ಎತ್ತಿದ ವಂಚಕರಿದ್ದಾರೆ. ಹಾಗಾಗಿ ಬಡವ ತನ್ನ ಜೀವಧಾತುವಾದ ಮೂತ್ರಪಿಂಡವನ್ನು ಕಳೆದುಕೊಳ್ಳುವುದರ ಜತೆಗೆ ಹಣವನ್ನೂ ಪಡೆಯದ ಅಸಹಾಯಕ ಸ್ಥಿತಿ ತಲುಪುತ್ತಾನೆ. ಈ ಸ್ಥಿತಿಯಂತೂ ಘನಘೋರವಾದುದು.

ಮಧ್ಯವರ್ತಿಗಳ ಮೂಲಕ ಬಡವರು ತಮ್ಮ ಅಮೂಲ್ಯ ಮೂತ್ರಪಿಂಡ ಮಾರಿಕೊಳ್ಳಲು ಕಾನೂನು ಪ್ರಕಾರ ಅವಕಾಶ ಇಲ್ಲ. ಬದಲಿ ಮಾನವ ಅಂಗಜೋಡಣೆ ನಿಯಂತ್ರಿಸಿ ಕೇಂದ್ರ ಸರ್ಕಾರ 1994ರಲ್ಲೇ ಶಾಸನ ಜಾರಿಗೆ ತಂದಿದೆ. 2002ರಲ್ಲಿ ಮಂಡ್ಯದಲ್ಲಿ ಮೂತ್ರಪಿಂಡ ಮಾರಾಟದ ದೊಡ್ಡ ದಂಧೆ ಪತ್ತೆಯಾದ ಮೇಲೆ ರಾಜ್ಯ ಸರ್ಕಾರವೂ ಮೂತ್ರಪಿಂಡ ಮಾರಾಟ ನಿಷೇಧಿಸಿ ಕಾನೂನಿನ ಅಸ್ತ್ರವನ್ನು ಮತ್ತಷ್ಟು ಬಲಪಡಿಸಿತು. ಆದರೆ ಸರ್ಕಾರ ಚಾಪೆ ಕೆಳಗೆ ತೂರಿದರೆ, ವಂಚಕರು ರಂಗೋಲಿ ಕೆಳಗೆ ತೂರಿ ಸರ್ಕಾರಕ್ಕೇ ಚಳ್ಳೆಹಣ್ಣು ತಿನ್ನಿಸುತ್ತಿದ್ದಾರೆ. ಹಾಗಾಗಿ ಪದೇ ಪದೇ ಇಂತಹ ಅಕ್ರಮಗಳು ವರದಿಯಾಗುತ್ತಲೇ ಇರುತ್ತವೆ. ಮೂತ್ರಪಿಂಡ ದಾನ ಮಾಡುವವನು ಪಡೆಯುವವನ ಸಂಬಂಧಿಕನೇ ಆಗಿದ್ದಾನೆ ಎಂಬುದನ್ನು ತೋರಿಸಲು ನಕಲಿ ಗುರುತಿನ ಚೀಟಿ, ಪಡಿತರ ಚೀಟಿಗಳನ್ನು ಸೃಷ್ಟಿಸಲಾಯಿತು. ಮೂತ್ರಪಿಂಡ ಪಡೆಯುವವನ ವಂಶವೃಕ್ಷದಲ್ಲಿ ಕೊಡುವವನ ಹೆಸರನ್ನು ಸೇರಿಸುವಂತಹ ಹೀನಕೃತ್ಯಕ್ಕೂ ಈ ದಲ್ಲಾಳಿಗಳು ಇಳಿದರು. ಸರ್ಕಾರದ ಕೆಲವು ಸಿಬ್ಬಂದಿಯೂ ಇದರಲ್ಲಿ ಶಾಮೀಲಾದರು.

ಮಾಗಡಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಹೊರಗುತ್ತಿಗೆ ನೌಕರ ಶ್ರೀಕಾಂತ್ ಎಂಬುವನು ಸರ್ಕಾರಿ ಕಚೇರಿಯ ಯಂತ್ರೋಪಕರಣವನ್ನೇ ದುರುಪಯೋಗ ಮಾಡಿಕೊಂಡು ನಕಲಿ ಗುರುತಿನ ಚೀಟಿ, ಪಡಿತರ ಚೀಟಿ ಸೃಷ್ಟಿಸಿದ್ದನ್ನು ಇದೀಗ ಪೊಲೀಸರು ದೃಢಪಡಿಸಿದ್ದಾರೆ. ಹಿರಿಯ ಅಧಿಕಾರಿಗಳೂ ಇದರಲ್ಲಿ ಶಾಮೀಲಂತೆ! ಬೇಲಿಯೇ ಎದ್ದು ಹೊಲ ಮೇಯ್ದ ಕಥೆ ಇದು.

ಮೂತ್ರಪಿಂಡವನ್ನು ಹೀಗೆ ಅಕ್ರಮವಾಗಿ ಕಸಿ ಮಾಡುವ ಕಾರ್ಯದಲ್ಲಿ ಬೆಂಗಳೂರಿನ 11 ಖಾಸಗಿ ಆಸ್ಪತ್ರೆಗಳು ನಿರತವಾಗಿವೆಯಂತೆ. ಅದಿನ್ನೂ ಹೆಚ್ಚೇ ಇರಬಹುದು. ಮೂತ್ರಪಿಂಡ ದಾನ ಕೊಡುವವರು ಬಹುತೇಕ ಮಹಿಳೆಯರು. ಗರ್ಭಕೋಶ ಅಥವಾ ಗರ್ಭಕೋಶದಲ್ಲಿನ ಗೆಡ್ಡೆಗೆ ಶಸ್ತ್ರಚಿಕಿತ್ಸೆ ನಡೆದಿದೆ ಎಂದು ಸುಳ್ಳು ಹೇಳಿ ಕಾನೂನಿನ ಕಣ್ಣಿಗೆ ಮಣ್ಣೆರಚುವ ಕೆಲಸ ನಡೆದೇ ಇದೆ. ಇಂತಹ ಕುಕೃತ್ಯಗಳಿಂದ ದಲ್ಲಾಳಿಗಳ ಹಾಗೂ ಆಸ್ಪತ್ರೆಗಳ ವೈದ್ಯರ ಬೊಕ್ಕಸ ತುಂಬಬಹುದು. ಆದರೆ ಬಡವರ ಜೀವ ಮತ್ತು ದ್ರವ್ಯ ಎರಡಕ್ಕೂ ಹಾನಿ. 'ಬಡವರು ಸತ್ತರೇ ಸುಡಲಿಕ್ಕೆ ಸೌದಿಲ್ಲ, ಶಿವನೇ... ಬಡವರಿಗೆ ಸಾವಾ ಕೊಡಬೇಡ...' ಅಷ್ಟೇ ಅಲ್ಲ, ಬಡವರಿಗೆ ಮೂತ್ರಪಿಂಡವನ್ನೇ ಕೊಡಬೇಡ!

**■ ಗುಡಿಹಳ್ಳಿ ನಾಗರಾಜ**



ಅಭಿಜಿತ್